# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿ.)

"ಗ್ರಾಮೀಣಾಭಿವೃದ್ಧಿ ಭವನ", 4 & 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560 009

ಸಂ. ಕೆಆರ್‌ಐಡಿಎಲ್/ಇಎಸ್‌ಟಿ/ಎಂಎಫ್-174/2013-14 ದಿನಾಂಕ: 03-04-2014

## ಅಧಿಸೂಚನೆ

ವಿಷಯ: ಕೆಆರ್‌ಐಡಿಎಲ್ ಸಂಸ್ಥೆಗೆ ರಚಿಸಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿ.

ಉಲ್ಲೇಖ: ದಿನಾಂಕ 03-03-2014 ರಂದು ನಡೆದ ಆಡಳಿತ ಮಂಡಳಿ ನಿರ್ದೇಶಕರುಗಳ 174ನೇ ಸಭೆಯ ನಡವಳಿ.

** ** ** ** **

ಕೆಆರ್‌ಐಡಿಎಲ್ ಸಂಸ್ಥೆಯು 8ನೇ ಆಗಸ್ಟ್ 1974 ರಲ್ಲಿ ಕಂಪನಿ ಕಾಯ್ದೆ 1956ರ ರೀತ್ಯ ರಚಿಸಿದ ನೋಂದಾಯಿತ ಸಂಸ್ಥೆಯಾಗಿರುತ್ತದೆ. ಪ್ರಮುಖವಾಗಿ ಸರ್ಕಾರದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ವಲಯದ ಉದ್ದಿಮೆಗಳು, ಸಂಘ ಸಂಸ್ಥೆಗಳು, ವ್ಯಕ್ತಿಗತವಾಗಿ ವಹಿಸುವ ಗ್ರಾಮೀಣಾಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ಹಾಗೂ ತಾಂತ್ರಿಕ ನೆರವು, ಸಹಕಾರ ಇತ್ಯಾದಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ. ಕಂಪನಿಯು ಪ್ರಾರಂಭದ ದಿವಸಗಳಲ್ಲಿ ಸರ್ಕಾರದ ಇಲಾಖೆಗಳಿಂದ ನಿಯೋಜಿಸಲ್ಪಟ್ಟ ಸಿಬ್ಬಂದಿಗಳನ್ನು ಅವಲಂಬಿಸಿದ್ದು, ಅಂತಹ ಸಿಬ್ಬಂದಿಗಳ ಸೇವಾ ಷರತ್ತುಗಳು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳಿಗೆ ಒಳಪಟ್ಟಿದ್ದರಿಂದ, ಸಂಸ್ಥೆಯದೇ ಆದ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಾವಳಿ ರಚನೆಯ ಅವಶ್ಯಕತೆ ಬಗ್ಗೆ ಆಲೋಚಿಸಿರಲಿಲ್ಲ.

1980 ಇಸವಿಯ ಪ್ರಾರಂಭದಲ್ಲಿ ಕಂಪನಿಯ ವಹಿವಾಟು ಹೆಚ್ಚಿದ್ದು, ವಿವಿಧ ವೃಂದದಲ್ಲಿ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ನೇಮಕಾತಿ ಮಾಡಲಾಗಿದೆ. ಈ ಕಾರಣಗಳಿಂದಾಗಿ, ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರುಗಳು ದಿನಾಂಕ 20-09-1996 ರಂದು ನಡೆದ ಸಭೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಅನುಮೋದನೆ ನೀಡಿರುತ್ತಾರೆ. ಇದರಲ್ಲಿ ಪ್ರಮುಖ ನಿಯಮಾವಳಿಗಳ ಅಧ್ಯಾಯಗಳು, ಸೇವಾ ಜೇಷ್ಠತೆಯ ಷರತ್ತುಗಳು, ಶಿಸ್ತು, ರಜೆ ಇತ್ಯಾದಿಗಳು ಅಡಕವಾಗಿವೆ. ಆದಾಗ್ಯೂ ಈ ನಿಯಮಾವಳಿಗೆ ಹಿಂದೆ ಸರ್ಕಾರದ ಅನುಮೋದನೆ ಪಡೆದಿರುವುದಿಲ್ಲ.

ಕಾಲಕ್ರಮೇಣ ಕಂಪನಿಯ ಕಾರ್ಯಬಾಹುಳ್ಯ ಹೆಚ್ಚಾಗುತ್ತಿದ್ದು, ತತ್ಸಂಬಂಧ ರಾಜ್ಯದ ಹಲವು ಸ್ಥಳಗಳಲ್ಲಿ ಕಾಮಗಾರಿಗಳ ಅನುಷ್ಠಾನಕ್ಕೆ ಪ್ರಾಜೆಕ್ಟ್ ಕಛೇರಿಗಳನ್ನು ಆರಂಭಿಸಲಾಗಿದೆ. ಆದಾಗ್ಯೂ ಇದಕ್ಕೆ ಅನುಗುಣವಾಗಿ ಅವಶ್ಯಕವಿರುವಷ್ಟು ಹುದ್ದೆಗಳನ್ನು ಸೃಜಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕಾಮಗಾರಿಗಳ ಪ್ರಗತಿಯಲ್ಲಿ ಕುಂಠಿತವಾಗಿರುತ್ತದೆ ಹಾಗೂ ಮಾನವ ಸಂಪನ್ಮೂಲ ಅದರಲ್ಲೂ ಪ್ರಮುಖವಾಗಿ ತಾಂತ್ರಿಕ ಕ್ಷೇತ್ರದಲ್ಲಿ ಕೊರತೆ ಉಂಟಾಗಿರುತ್ತದೆ.

ಮೇಲ್ಕಂಡ ನ್ಯೂನತೆಯನ್ನು ಸರಿಪಡಿಸಲು ಮತ್ತು ಕಂಪನಿಗೆ ವಹಿಸಿರುವ ಕಾಮಗಾರಿಗಳ ಅನುಷ್ಠಾನಕ್ಕೆ ಅವಶ್ಯಕತೆ ಇರುವಷ್ಟು ಹುದ್ದೆಯನ್ನು ಸೃಜಿಸುವುದು ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ರಚಿಸಿ, ದಿನಾಂಕ 18-12-2013 ರಂದು ನಡೆದ ಕಂಪನಿಯ 173ನೇ ಸಭೆಯಲ್ಲಿ ಪರಿಗಣನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿತ್ತು. ಈ ಪ್ರಸ್ತಾವನೆಯನ್ನು ಆಡಳಿತ ಮಂಡಳಿಯು

. . . . . .2

ಎಚ್ಚರಿಕೆಯಿಂದ ಪರಿಶೀಲಿಸಿ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಹಿರಿಯ ಅಧಿಕಾರಿಗಳನ್ನೊಳಗೊಂಡ ಉಪ ಸಮಿತಿಯನ್ನು ರಚಿಸಿ, ಈ ಉಪ ಸಮಿತಿಯು ರಚಿಸುವ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಆಡಳಿತ ಮಂಡಳಿ ಸಭೆಯ ಪರಿಗಣನೆಗೆ ಮಂಡಿಸುವಂತೆ ತೀರ್ಮಾನಿಸಿರುತ್ತದೆ.

ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ದಿನಾಂಕ 03-03-2014 ರಂದು ನಡೆದ ಕಂಪನಿಯ 174ನೇ ಆಡಳಿತ ಮಂಡಳಿ ನಿರ್ದೇಶಕರುಗಳ ಸಭೆಯ ಮುಂದೆ ಪರಿಗಣನೆಗೆ ಮತ್ತು ತೀರ್ಮಾನಕ್ಕೆ ಮಂಡಿಸಲಾಗಿತ್ತು.

ಆಡಳಿತ ಮಂಡಳಿಯು ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಿ, ಕರಡು ನಿಯಮಾವಳಿಯನ್ನು ಅನುಮೋದಿಸಿರುತ್ತದೆ. ಅದೂಅಲ್ಲದೇ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಮಂಡಳಿಯ ಸಲಹೆ ಸೂಚನೆಗಳನ್ನು ಸೂಕ್ತ ರೀತಿಯಲ್ಲಿ ಅಳವಡಿಸಿಕೊಂಡು, ಅನುಮೋದಿತ ನಿಯಮಾವಳಿಯನ್ನು ಸಂಸ್ಥೆಯ ನೋಟೀಸ್ ಬೋರ್ಡ್, ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಇದಕ್ಕೆ ಅಧಿಕಾರಿಗಳ/ ಸಿಬ್ಬಂದಿಗಳ/ ಒಕ್ಕೂಟ/ ಯೂನಿಯನ್‌ಗಳ ಸಲಹೆ ಸೂಚನೆಗಳನ್ನು ಮತ್ತು ಆಕ್ಷೇಪಣೆಗಳನ್ನು ಆಹ್ವಾನಿಸಲು ತೀರ್ಮಾನಿಸಿರುತ್ತದೆ.

ಮೇಲ್ಕಂಡ ಕಾರಣಗಳ ಹಿನ್ನೆಲೆಯಲ್ಲಿ ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಕಂಪನಿಯ ವೆಬ್‌ಸೈಟ್ www.kridl.gov.in **download link** ನಲ್ಲಿ ಪ್ರಕಟಿಸಿದೆ.

ಸಂಸ್ಥೆಯ ಪ್ರಧಾನ ಕಛೇರಿಯ ಅಧಿಕಾರಿಗಳು ಹಾಗೂ ಪ್ರಾಜೆಕ್ಟ್ ಅಧಿಕಾರಿಗಳು ಕರಡು ವೃಂದ ಮತ್ತು ನೇಮಕಾತಿ ನಿಯಮಾವಳಿ ಪ್ರಕಟಿಸಿರುವುದನ್ನು ತಮ್ಮ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಗಮನಕ್ಕೆ ತರಲು ಕೋರಿದೆ. ಈ ಬಗ್ಗೆ ಯಾವುದೇ ಸಲಹೆ/ ಸೂಚನೆ ಅಥವಾ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ಅಧಿಸೂಚನೆ ಪ್ರಕಟಿಸಿದ 15 ದಿವಸಗಳೊಳಗೆ ಸಲ್ಲಿಸಲು ಸೂಚಿಸಬಹುದು

**ವ್ಯವಸ್ಥಾಪಕ ನಿರ್ದೇಶಕರು**
**ಕೆಆರ್‌ಐಡಿಎಲ್, ಬೆಂಗಳೂರು.**

ಗೆ,

- ಎಲ್ಲಾ ಮುಖ್ಯ ಅಭಿಯಂತರರುಗಳು, ಕೆಆರ್‌ಐಡಿಎಲ್, ಬೆಂಗಳೂರು.
- ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್, ಬೆಂಗಳೂರು.
- ಎಲ್ಲಾ ಅಧೀಕ್ಷಕ ಅಭಿಯಂತರರುಗಳು, ಕೆಆರ್‌ಐಡಿಎಲ್.
- ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು, ಕೆಆರ್‌ಐಡಿಎಲ್.
- ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು, ಕೆಆರ್‌ಐಡಿಎಲ್.
- ಎಲ್ಲಾ ಒಕ್ಕೂಟ/ ಯೂನಿಯನ್‌ಗಳ ಅಧ್ಯಕ್ಷರು, ಕೆಆರ್‌ಐಡಿಎಲ್,
- ಸೂಚನಾ ಫಲಕಕ್ಕೆ